ನಿರ್ವಹಿಸುತ್ತಿರುವ ಸರ್ಕಾರಿ ನೌಕರರು ಕರ್ನಾಟಕ ಸರ್ಕಾರದ ಸೇವಾ (ನಡತೆ) ನಿಯಮಾವಳಿಗಳು 1966ರನ್ವಯ ತಮ್ಮ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಕಟ್ಟುನಿಟ್ಟಾಗಿ ಪ್ರತಿವರ್ಷ ಘೋಷಿಸಬೇಕಾಗಿರುತ್ತದೆ.

ಇ) ಇಲ್ಲ. ಇಂತಹ ಸೂಚನೆಗಳು ಮಂತ್ರಿಗಳಿಂದ ಮುಂದಲ್ಲಿ ಪರಿಶೀಲಿಸಲಾಗುವುದು.

ತುರುವೇಕೆರೆಗೆ ಬಸ್ ಡಿಪೋ ಮಂಜೂರಾತಿ.

913(1751) ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):- ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುರುವೆಕೇರೆ ಬಸ್ ಡಿಪೋ ಮಂಜೂರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದರೆ, ಯಾವಾಗ ಕೆಲಸ ಪ್ರಾರಂಭ ಮಾಡಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಅ) ಹೌದು

ಆ) 1993-94ನೇ ಸಾಲಿನಲ್ಲಿ ಪ್ರಾರಂಭ ಮಾಡಲಾಗುವುದು.

ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿ.

914(1479) ಶ್ರೀ ವೈ.ಕೆ. ರಾಮಯ್ಯ(ಕುಣಿಗಲ್) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು 58 ವರ್ಷಗಳಿಂದ 55 ವರ್ಷಗಳಿಗೆ ಇಳಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ, ಯಾವಾಗ ಅನುಷ್ಠಾನಗೊಳಿಸಲಾಗುತ್ತಿದೆ ?

ಇ) ಈ ನಿರ್ಧಾರದಿಂದಾಗುವ ಅನುಕೂಲಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ(ಮುಖ್ಯಮಂತ್ರಿಯವರು):-

ಅ) ಇಲ್ಲ.

ಆ) ಅ ಪ್ರಶ್ನೆಗೆ ನೀಡಿದ ಉತ್ತರದಿಂದ ಈ ಪ್ರಶ್ನೆಗಳಿಗೆ ಉತ್ತರ ಉದ್ಭವಿಸುವುದಿಲ್ಲ.

ಬೈಲಹೊಂಗಲ ಡಿಪೋಗೆ ಹೊಸ ಬಸ್ಸುಗಳು.

915(1483ಎ) ಶ್ರೀ ಶಿವಾನಂದ ಹೆಚ್. ಕೌಜಲಗಿ(ಬೈಲಹೊಂಗಲ):- ಮಾನ್ಯ ಸಾರಿಗೆ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೈಲಹೊಂಗಲ ಡಿಪೋದಲ್ಲಿ ಎಷ್ಟು ಬಸ್ಸುಗಳಿರುತ್ತವೆ, ಮತ್ತು ಅವುಗಳಲ್ಲಿ 6 ಲಕ್ಷಕ್ಕಿಂತಲೂ ಹೆಚ್ಚಿಗೆ ಓಡಿದ ಬಸ್ಸುಗಳೆಷ್ಟು ಹಾಗು 7 ಲಕ್ಷಕ್ಕಿಂತಲೂ ಹೆಚ್ಚಿಗೆ ಓಡಿದ ಬಸ್ಸುಗಳೆಷ್ಟು,

ಆ) ಬೈಲಹೊಂಗಲ ಡಿಪೋದಲ್ಲಿ ಹಳೇ ಬಸ್ಸುಗಳು ಬಹಳ ಇದ್ದು ಅವುಗಳನ್ನು ಬದಲಿಸಿ ಹೊಸ ಬಸ್ಸುಗಳನ್ನು ಕೊಡಲು ವ್ಯವಸ್ಥೆ ಮಾಡುವರೇ.

ಇ) ಬೈಲಹೊಂಗಲ ಡಿಪೋದಲ್ಲಿ ಇಂಚಲಕ್ಕೆ ಹೋಗುವ ಬಸ್ ನಿಲ್ದಾಣವು ಶಿಥಿಲಗೊಂಡಿದ್ದು ಯಾವುದೇ ಪ್ರಸಂಗದಲ್ಲಿ ಬೀಳುವ ಸ್ಥಿತಿಯಲ್ಲಿದ್ದು ಅದನ್ನು ದುರಸ್ಥಿ ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಈ) ಬೈಲಹೊಂಗಲ ಬಸ್‌ಸ್ಟ್ಯಾಂಡದಲ್ಲಿ ಸ್ವಚ್ಛತೆ ಇಲ್ಲದೆ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ. ಹಾಗಿದ್ದಲ್ಲಿ ಸ್ವಚ್ಛತೆ ಕಾಪಾಡಲು ಯಾವ ಕ್ರಮ ಕೈಕೊಳ್ಳುವರು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಅ) ಬೆಳಗಾವಿ ವಿಭಾಗದ ಬೈಲಹೊಂಗಲ ಘಟಕದಲ್ಲಿ 90 ಅನುಸೂಚಿಗಳನ್ನು ನಡೆಸಲು 96 ವಾಹನಗಳು ಇರುತ್ತವೆ. ಈ ವಾಹನಗಳಲ್ಲಿ 6 ಲಕ್ಷದಿಂದ 7 ಲಕ್ಷ ಕಿ.ಮೀ. ಚಲಿಸಿರುವಂತಹ ವಾಹನಗಳು 20, 7ಲಕ್ಷಕ್ಕಿಂತ ಹೆಚ್ಚು ಚಲಿಸಿರುವ ವಾಹನಗಳು 20.

ಆ) ಸಂಸ್ಥೆಯ ನಿಗದಿಯ ಪ್ರಕಾರ ವಾಹನವು 7.5 ಲಕ್ಷ ಕಿ.ಮೀ.ಚಲಿಸಿದ ನಂತರ ನಿಷ್ಕ್ರಿಯಗೊಳಿಸಲು ಅರ್ಹವಾಗುತ್ತದೆ. ಅದರಂತೆ ಈ ನಿಗದಿ ಪಡಿಸಿದ ಕಿ.ಮೀ. ಕಾರ್ಯಚರಣೆ ಯಾಗಿರುವಂತಹ ವಾಹನಗಳನ್ನು ದೀರ್ಘವಾಗಿ ಪರಿಶೀಲಿಸಿ ನಿಷ್ಕ್ರಿಯಗೊಳಿಸಬೇಕೆಂಬ ನಿರ್ಣಯಕ್ಕೆ ಬಂದರೆ ಅವುಗಳನ್ನು ಹಿಂತೆಗೆದುಕೊಂಡು ಹೊಸ ವಾಹನಗಳನ್ನು ಒದಗಿಸಲಾಗುವುದು. ಇದಲ್ಲದೆ ಇತರೆ ವಾಹನಗಳನ್ನು ಸಹ ಪರೀಕ್ಷಿಸಿ ನಿಗದಿಪಡಿಸಿದ ಕಿ.ಮೀ. ಚಲಿಸದೇ ಇದ್ದರೂ ಸಹ ದುಸ್ಥಿತಿಯಲ್ಲಿದ್ದು ದುರಸ್ತಿಗೆ ಬಹಳ ವೆಚ್ಚವಾಗುವುವಂತಿದ್ದರೆ ಅವುಗಳನ್ನು ಸಹ ಹಂತ ಹಂತವಾಗಿ ನಿಷ್ಕ್ರಿಯಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಈಗಾಗಲೇ ಏಪ್ರಿಲ್ 92ರಿಂದ ಫೆಬ್ರವರಿ 93 ರವರೆಗೆ 25 ಹೊಸ ವಾಹನಗಳನ್ನು ಈ ಘಟ್ಟಕ್ಕೆ ನೀಡಿದ್ದು ಇನ್ನು ಮುಂದೆ ಸಹ ಬೆಳಗಾವಿ ವಿಭಾಗಕ್ಕೆ ಒದಗಿಸುವ ಹೊಸ ವಾಹನಗಳಲ್ಲಿ ಬೇಕಾದಷ್ಟು ವಾಹನಗಳನ್ನು ಮರು ಹಂಚಿಕೆ ಮಾಡಲಾಗುವುದು.

ಇ) -ಹೌದು-

ಈ) ಇಲ್ಲ, ಬೈಲಹೊಂಗಲ ಬಸ್ ನಿಲ್ದಾಣದ ಸ್ವಚ್ಛತೆಯನ್ನು ಕಾಪಾಡುವ ಸಲುವಾಗಿ ಸಂಸ್ಥೆಯು ಸ್ವಚ್ಛತಾ ಗುತ್ತಿತಿಗೆದಾರರನ್ನು ನೇಮಿಸಿರುತ್ತದೆ ಹಾಗು ಬಸ್ ನಿಲ್ದಾನವನ್ನು ಪ್ರತಿದಿನ ಸ್ವಚ್ಛವಾಗಿಡಲಾಗುತ್ತಿದೆ.

ರಾಜ್ಯದಲ್ಲ ರಾಜಕೀಯ ಸಂತ್ರಸ್ಥರಿಗೆ ಕೊಡಲಾಗುತ್ತಿರುವ ಪಿಂಚಣಿ

916(1646) ಶ್ರೀ ಕೆ.ಸಿದ್ದಯ್ಯ(ಸಂತೇಮಾರನಹಳ್ಳಿ) :- ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?